**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

ಲೆಕ್ಕ ಪತ್ರ ಸ್ಥಾಯಿ ಸಮಿತಿಯಲ್ಲಿ ದಿನಾಂಕ: 15-11-2016 ರಂದು ಮಧ್ಯಾಹ್ನ 3.00 ಗಂಟೆಗೆ ನಡೆದ ಸಭೆಯ ನಡವಳಿಗಳು

| ಕ್ರ. ಸಂ | ಹಾಜರಿದ್ದ ಸದಸ್ಯರು ಶ್ರೀಯುತರುಗಳಾದ | | ಹಾಜರಿದ್ದ ಅಧಿಕಾರಿಗಳು |
|---|---|---|---|
| 1. | ನೇತ್ರಾ ನಾರಾಯಣ್ | - ಅಧ್ಯಕ್ಷರು | ಮುಖ್ಯ ಲೆಕ್ಕಾಧಿಕಾರಿಗಳು |
| 2. | ಸವಿತಾ ವಿ.ಕೃಷ್ಣ | - ಸದಸ್ಯರು | ಉಪ ನಿಯಂತ್ರಕರು (ಹಣಕಾಸು) |
| 3. | ಎನ್.ಉಮಾ | - ಸದಸ್ಯರು | ಸ.ನಿ (ಆಡಿಟ್ ಸೆಲ್) |
| 4. | ರಾಧಮ್ಮ ವೆಂಕಟೇಶ್ | - ಸದಸ್ಯರು | ಎ.ಸಿ. (ಆಡಿಟ್ ಸೆಲ್) |
| 5. | ಜಿ.ಬಾಲಕೃಷ್ಣನ್ | - ಸದಸ್ಯರು | ಎ.ಓ (ಆಡಿಟ್ ಸೆಲ್) |
| 6. | ವಿ.ಸುರೇಶ್ | - ಸದಸ್ಯರು | ಉಪ ಆಯುಕ್ತರು (ದಕ್ಷಿಣ) |
| 7. | ಹೆಚ್.ಕುಸುಮಾ | - ಸದಸ್ಯರು | ಕೌನ್ಸಿಲ್ ಕಾರ್ಯದರ್ಶಿಗಳು |
| 8. | ಎಂ.ಮಾಲತಿ | - ಸದಸ್ಯರು | ಸಂಬಂಧಪಟ್ಟ ಎಲ್ಲಾ |
| 9. | ಎಂ.ಶಾಮಲ | - ಸದಸ್ಯರು | ಸಹ ಕಂದಾಯ ಅಧಿಕಾರಿಗಳು |
| 10. | ಕೆ.ವಿ.ರಾಜೇಂದ್ರಕುಮಾರ್ | - ಸದಸ್ಯರು | ತೋ.ಅ.(ದಕ್ಷಿಣ).ಆರೋಗ್ಯಾಧಿಕಾರಿ(ದಕ್ಷಿಣ) |
| 11. | ಎಂ.ಗೌತಮ್ ಕುಮಾರ್ | - ಸದಸ್ಯರು | ಸ.ನಿ.(ಹಣಕಾಸು-ದಕ್ಷಿಣ) |

ಮಾನ್ಯ ಅಧ್ಯಕ್ಷರು ಸಭೆಯಲ್ಲಿ ಹಾಜರಿದ್ದ ಸಮಿತಿಯ ಸದಸ್ಯರುಗಳಿಗೆ ಮತ್ತು ಅಧಿಕಾರಿಗಳಿಗೆ ಸ್ವಾಗತ ಕೋರಿ, ತಮ್ಮ ಪರಿಚಯವನ್ನು ಮಾಡಿಕೊಂಡು ನಂತರ ಸಮಿತಿಯ ಸದಸ್ಯರುಗಳು ಮತ್ತು ಅಧಿಕಾರಿಗಳು ಸಭೆಗೆ ತಮ್ಮ ಪರಿಚಯ ಮಾಡಿಕೊಳ್ಳುವಂತೆ ಕೋರಿದರು. ಅದರಂತೆ, ಹಾಜರಿದ್ದ ಸಮಿತಿಯ ಸದಸ್ಯರುಗಳು ಹಾಗೂ ಎಲ್ಲಾ ಅಧಿಕಾರಿಗಳು ಸಭೆಗೆ ತಮ್ಮ ಪರಿಚಯ ಮಾಡಿಕೊಂಡರು.

ಅಧ್ಯಕ್ಷರು ಮಾತನಾಡುತ್ತಾ ದಕ್ಷಿಣ ವಲಯಕ್ಕೆ ಸಂಬಂಧಿಸಿದಂತೆ 2006-07ನೇ ಸಾಲಿನಿಂದ ಇದುವರೆಗಿನ ಲೆಕ್ಕಪರಿಶೋಧನಾ ವರದಿಯಲ್ಲಿ ಆಕ್ಷೇಪಣೆಯಲ್ಲಿಟ್ಟಿರುವ ಮೊತ್ತ ಮತ್ತು ವಸೂಲಾತಿ ಮೊತ್ತದ ಬಗ್ಗೆ ಚರ್ಚಿಸುವ ಸಲುವಾಗಿ ಸಭೆಯನ್ನು ನಿಗಧಿಪಡಿಸಿ, ಸಮಿತಿಯು ಸಭೆಯ ತಿಳುವಳಿಕೆ ಪತ್ರವನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಜಾರಿ ಮಾಡಿ ಸಭೆಗೆ ಮಾಹಿತಿಗಳೊಂದಿಗೆ ಹಾಜರಾಗುವಂತೆ ಕಳುಹಿಸಲಾಗಿದ್ದರೂ, ಕೆಲವು ಅಧಿಕಾರಿಗಳು ಸಭೆಗೆ ಗೈರು ಹಾಜರಾಗಿರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿ, ಸಭೆಗೆ ಹಾಜರಾಗದ ಅಧಿಕಾರಿಗಳಿಗೆ ನೋಟೀಸು ಜಾರಿ ಮಾಡುವಂತೆ ಆಯುಕ್ತರಿಗೆ ಶಿಫಾರಸ್ಸು ಮಾಡುವುದಾಗಿ ತಿಳಿಸಿದರು.

ಅಧ್ಯಕ್ಷರು
ಲೆಕ್ಕಪತ್ರ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಮುಂದುವರಿದು ಅಧ್ಯಕ್ಷರು ಮಾತನಾಡುತ್ತಾ, ಬೆಂಗಳೂರು ಮಹಾನಗರ ಪಾಲಿಕೆಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಾಗಿ ವಿಸ್ತಾರಗೊಂಡ ನಂತರದ ಅಂದರೆ 2006–07ನೇ ಸಾಲಿನಿಂದ ತಹಲ್‌ವರೆಗಿನ ಲೆಕ್ಕಪರಿಶೋಧನಾ ವರದಿಯನ್ನು ಪರಿಶೀಲಿಸಲು ತೀರ್ಮಾನಿಸಿದ್ದು, ಸದರಿ ಸಾಲುಗಳಿಗೆ ಸಂಬಂಧಿಸಿದ ವಿವರವಾದ ವರದಿಯ ಮಾಹಿತಿಯನ್ನು ಸಮಿತಿಗೆ ಸಲ್ಲಿಸಲು ಹಾಜರಿದ್ದ ಅಧಿಕಾರಿ/ಸಿಬ್ಬಂದಿಗಳಿಗೆ ಸೂಚಿಸಲಾಯಿತು.

ನಂತರ ಮುಖ್ಯ ಲೆಕ್ಕಾಧಿಕಾರಿಯವರು ಮಾತನಾಡುತ್ತಾ, ಪಾಲಿಕೆಯ ವ್ಯಾಪ್ತಿಯ ವಿವಿಧ ಕಛೇರಿಗಳಲ್ಲಿನ ವಾರ್ಷಿಕ ಲೆಕ್ಕ ಪರಿಶೋಧನಾ ವರದಿಯಲ್ಲಿ ಬಾಕಿ ಇರುವ ಆಕ್ಷೇಪಣೆ ಮತ್ತು ವಸೂಲಾತಿ ಮೊತ್ತಗಳ ತೀರುವಳಿಗೆ ಸಂಬಂಧಿಸಿದಂತೆ ದಕ್ಷಿಣ ವಲಯಕ್ಕೆ ಸಂಬಂಧಿಸಿದಂತೆ, 2006–07 ರಿಂದ 2013–14 ರವರೆಗೆ ಒಟ್ಟು 1534 ಕಂಡಿಕೆಗಳು ಬಾಕಿ ಇದ್ದು, ಒಟ್ಟು 181.28/– ಕೋಟಿ ಆಕ್ಷೇಪಣೆ ಮೊತ್ತ ಇದ್ದು, ರೂ.109.46/– ಕೋಟಿ ವಸೂಲಾತಿಗೆ ಇರುವುದಾಗಿ ಸಭೆಗೆ ಮಾಹಿತಿ ನೀಡುತ್ತಾ ಪಾಲಿಕೆಯ ಆರ್ಥಿಕ ಹಿತದೃಷ್ಟಿಯಿಂದ ಬಾಕಿ ಇರುವ ಆಕ್ಷೇಪಣೆ ಮತ್ತು ವಸೂಲಾತಿ ಮೊತ್ತಗಳ ತೀರುವಳಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕೆಂದು ಸಭೆಯಲ್ಲಿ ಹಾಜರಿದ್ದ ಅಧಿಕಾರಿ/ಸಿಬ್ಬಂದಿಗಳಿಗೆ ತಿಳಿಸಲಾಯಿತು.

ನಂತರ ಅಧ್ಯಕ್ಷರು ದಕ್ಷಿಣ ವಲಯ ಉಪ ಆಯುಕ್ತರವರಿಗೆ ದಕ್ಷಿಣ ವಲಯಕ್ಕೆ ಸಂಬಂಧಿಸಿದಂತೆ ಬಾಕಿ ಇರುವ ಕಂಡಿಕೆಗಳಿಗೆ, ಆಕ್ಷೇಪಣೆಗಳಿಗೆ ಹಾಗೂ ವಸೂಲಾತಿಗೆ ಸಂಬಂದಿಸಿದ ವಿವರಗಳನ್ನು ಸಭೆಗೆ ಸಲ್ಲಿಸಲು ಸೂಚಿಸಲಾಗಿ, ಉಪ ಆಯುಕ್ತರವರು ತಾವು ದಕ್ಷಿಣ ವಲಯದಲ್ಲಿ ಕಳೆದ 3 ತಿಂಗಳಿನಿಂದ ಕರ್ತವ್ಯ ನಿರ್ವಹಿಸುತ್ತಿದ್ದು, ಲೆಕ್ಕ ಪರಿಶೋಧನಾ ವರದಿಗಳ ಆಕ್ಷೇಪಣೆ ಹಾಗೂ ವಸೂಲಾತಿಗೆ ಸಂಬಂಧಿಸಿದಂತೆ ಅಧೀನ ಅಧಿಕಾರಿಗಳಿಂದ ಮಾಹಿತಿಯನ್ನು ಪಡೆದು, ಪರಿಶೀಲಿಸಿ ಸಮಿತಿಗೆ ವರದಿ ಸಲ್ಲಿಸಲು ಕಾಲಾವಕಾಶ ನೀಡುವಂತೆ ಕೋರಿದ ಮೇರೆಗೆ, ಅದರಂತೆ ಅಗತ್ಯ ಕ್ರಮ ಕೈಗೊಳ್ಳಲು ಹಾಗೂ ಸಭೆಗೆ ಹಾಜರಾಗದೆ ಇರುವ ಅಧಿಕಾರಿಗಳಿಗೆ ಕಾರಣ ಕೇಳಿ ಪತ್ರವನ್ನು ಜಾರಿ ಮಾಡಿ ಸಮಜಾಹಿಷಿಯನ್ನು ಪಡೆದು ಸಮಿತಿಗೆ ಮಾಹಿತಿ ನೀಡಲು ಉಪ ಆಯುಕ್ತರವರಿಗೆ ಸೂಚಿಸುತ್ತಾ, ಇನ್ನು ಮುಂದೆ ವಲಯ ಮಟ್ಟದಲ್ಲಿ ಪ್ರತಿ ತಿಂಗಳಿಗೊಮ್ಮೆ ಲೆಕ್ಕಪತ್ರ ನಿರ್ವಹಣೆ ಕುರಿತಂತೆ ಅಧೀನ ಕಛೇರಿಗಳ ಅಧಿಕಾರಿಗಳ ಸಭೆಯನ್ನು ನಿಗಧಿಪಡಿಸಿ, ಚರ್ಚಿಸಿ ಕಾಲಕಾಲಕ್ಕೆ ಸಮಿತಿಗೆ ವರದಿಯನ್ನು ಸಲ್ಲಿಸಲು ಹಾಗೂ ಮುಂದಿನ ದಿನಗಳಲ್ಲಿ ಸಮಿತಿಯು ನಡೆಸುವ ಸಭೆಗೆ ಎಲ್ಲಾ ವಿವರಗಳೊಂದಿಗೆ ಹಾಜರಾಗಬೇಕೆಂದು ಸೂಚಿಸಲಾಯಿತು.

ಮುಂದುವರಿದು ಸಭೆಯಲ್ಲಿ ಹಾಜರಿದ್ದ ತೋಟಗಾರಿಕಾ ಅಧೀಕ್ಷಕರು (ದಕ್ಷಿಣ) ರವರಿಗೆ ಅವರ ಕಛೇರಿಗೆ ಸಂಬಂಧಪಟ್ಟಂತೆ ಲೆಕ್ಕ ಪರಿಶೋಧನಾ ವರದಿಯ ಸಂಪೂರ್ಣ ಮಾಹಿತಿಯನ್ನು ಸಭೆಗೆ

ಅಧ್ಯಕ್ಷರು
ಲೆಕ್ಕಪತ್ರ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಸಲ್ಲಿಸಲು ಸೂಚಿಸಿದಾಗ, ಸದರಿಯವರು ಯಾವುದೇ ಸಮರ್ಪಕ ಮಾಹಿತಿಯನ್ನು ಸಭೆಗೆ ನೀಡುವಲ್ಲಿ ವಿಫಲರಾಗಿರುತ್ತಾರೆ. ಶ್ರೀ ಗೌತಮ್ ಕುಮಾರ್, ಸದಸ್ಯರು ಮಾತನಾಡುತ್ತಾ, ದಕ್ಷಿಣ ವಲಯ ವ್ಯಾಪ್ತಿಯಲ್ಲಿ ತೋಟಗಾರಿಕಾ ಅಧೀಕ್ಷಕರವರ ಕಛೇರಿಯಿಂದ ನಿರ್ವಹಣೆ ಮಾಡುತ್ತಿರುವ ಉದ್ಯಾನವನಗಳ ವಿವರ, ಅವುಗಳ ನಿರ್ವಹಣೆಗೆ ಸಂಬಂಧಪಟ್ಟ ಸಂಪೂರ್ಣ ಕಡತಗಳನ್ನು ಸಮಿತಿಯ ಕಛೇರಿಗೆ ಪರಿಶೀಲನೆಗೆ ತರಲು ಸೂಚಿಸಲಾಯಿತು.

ನಂತರ ಸಹಾಯಕ ಕಂದಾಯ ಅಧಿಕಾರಿ, ಕೆಂಪೇಗೌಡನಗರ ಉಪವಲಯ, ಸಹಾಯಕ ಕಂದಾಯ ಅಧಿಕಾರಿ, ಪದ್ಮನಾಭನಗರ ಉಪವಲಯ, ಸಹಾಯಕ ಕಂದಾಯ ಅಧಿಕಾರಿ, ಜಯನಗರ, ಸಹಾಯಕ ಕಂದಾಯ ಅಧಿಕಾರಿ, ಬಿಟಿಎಂ ಲೇಔಟ್, ಸಹಾಯಕ ಕಂದಾಯ ಅಧಿಕಾರಿ, ವಿಜಯನಗರ, ಸಹಾಯಕ ಕಂದಾಯ ಅಧಿಕಾರಿ, ಜೆ.ಪಿ.ನಗರ, ಸಹಾಯಕ ಕಂದಾಯ ಅಧಿಕಾರಿ, ಬಸವನಗುಡಿ, ಸಹಾಯಕ ಕಂದಾಯ ಅಧಿಕಾರಿ, ಹೊಂಬೆಗೌಡನಗರ, ಸಹಾಯಕ ಕಂದಾಯ ಅಧಿಕಾರಿ, ಗಿರಿನಗರ, ಸಹಾಯಕ ಕಂದಾಯ ಅಧಿಕಾರಿ, ಗಾಳಿ ಆಚಿಜನೇಯಸ್ವಾಮಿ ದೇವಸ್ಥಾನ ಕಛೇರಿಗಳಿಂದ ಹಾಜರಿದ್ದ ಅಧಿಕಾರಿ/ಸಿಬ್ಬಂದಿಗಳು ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ ಸಮಿತಿಯು ಕೋರಿರುವ ಎಲ್ಲಾ ವಿವರಗಳನ್ನು ಸಲ್ಲಿಸುವುದಾಗಿ ತಿಳಿಸುತ್ತಾ, ಈಗಾಗಲೇ ಲೆಕ್ಕ ಪರಿಶೋಧನಾ ವರದಿಯಲ್ಲಿನ ಆಕ್ಷೇಪಣೆ, ವಸೂಲಾತಿ ಮತ್ತು ತೀರುವಳಿಗೆ ಸಂಬಂಧಿಸಿದಂತೆ ಅನುಸರಣಾ ವರದಿ ಸಲ್ಲಿಸಲು ಅಗತ್ಯ ಕ್ರಮಗಳನ್ನು ಕೈಗೊಂಡಿರುವುದಾಗಿ ಸಭೆಗೆ ಮಾಹಿತಿ ನೀಡಿದ ಮೇರೆಗೆ, ಮುಂದಿನ ಸಭೆಗೆ ಎಲ್ಲಾ ವಿವರಗಳೊಂದಿಗೆ ಹಾಜರಾಗಲು ಸೂಚಿಸಲಾಯಿತು.

ನಂತರ ಸಮಿತಿಯ ಸದಸ್ಯರಾದ ಶ್ರೀಯುತ ಗೌತಮ್ ರವರು ಮಾತನಾಡುತ್ತಾ, ಸಮಿತಿಯು ಪಾಲಿಕೆಯ ಆರ್ಥಿಕ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು, ಪಾಲಿಕೆಯನ್ನು ಆರ್ಥಿಕ ಅಭಿವೃದ್ದಿಯತ್ತ ಕೊಂಡೊಯ್ಯುವ ನಿಟ್ಟಿನಲ್ಲಿ ಈ ಸಾಲಿನಲ್ಲಿ ಹಲವಾರು ಯೋಜನೆಗಳನ್ನು ಹಮ್ಮಿಕೊಳ್ಳಲ್ಲಿದ್ದು, ಅದಕ್ಕೆ ಪೂರಕವಾಗಿ ಲೆಕ್ಕ ಪರಿಶೋಧನಾ ವರದಿಯಲ್ಲಿನ ಆಕ್ಷೇಪಣೆ, ವಸೂಲಾತಿ ಮತ್ತು ತೀರುವಳಿಗೆ ಸಂಬಂಧಿಸಿದಂತೆ ಪಾಲಿಕೆ ವ್ಯಾಪ್ತಿಯಲ್ಲಿನ ಎಲ್ಲಾ ಕಛೇರಿಯ ಅಧಿಕಾರಿಗಳು ಕರ್ತವ್ಯವನ್ನು ನಿರ್ವಹಿಬೇಕೆಂದು, ಅಲ್ಲದೆ ಸಮಿತಿಯು ಯಾವುದೇ ಸಮಯದಲ್ಲಿ ಕಛೇರಿಗಳಿಗೆ ತಪಾಸಣೆಗೆ ಬರುವುದಾಗಿ ತಿಳಿಸಿ, ಲೆಕ್ಕಪತ್ರ ನಿರ್ವಹಣೆಯಲ್ಲಿ ಲೋಪದೋಷಗಳು ಕಂಡುಬಂದಲ್ಲಿ ಅಧಿಕಾರಿಗಳ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಲಾಯಿತು.

ಮುಂದುವರಿದು ಹಾಜರಿದ್ದ ವಲಯ ಸಹಾಯಕ ನಿಯಂತ್ರಕರು (ಹಣಕಾಸು-ದಕ್ಷಿಣ) ರವರಿಗೆ ಅವರ ಕಛೇರಿಯ ಕಾರ್ಯವ್ಯಾಪ್ತಿಯ ಬಗ್ಗೆ ಸಭೆಗೆ ಮಾಹಿತಿ ನೀಡಲು ಸೂಚಿಸಲಾಗಿ, ಸದರಿಯವರು

ಅಧ್ಯಕ್ಷರು
ಲೆಕ್ಕಪತ್ರ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಮುಖ್ಯವಾಗಿ ವಲಯ ವ್ಯಾಪ್ತಿಯ ಅಧೀನ ಕಛೇರಿಗಳಿಂದ ಬರುವ ವಿವಿಧ ವೆಚ್ಚಗಳಿಗೆ ಸಂಬಂಧಿಸಿದ ಬಿಲ್‌ಗಳನ್ನು ಪಾವತಿಸುವುದು ಇತ್ಯಾದಿ ಕರ್ತವ್ಯಗಳನ್ನು ನಿರ್ವಹಿಸುವುದಾಗಿ ತಿಳಿಸಿದಾಗ, ಯಾವುದೇ ಬಿಲ್‌ಗಳನ್ನು ಪಾವತಿಸುವ ಮುಂಚಿತವಾಗಿ ಸದರಿ ಕಛೇರಿಯವರು ಲೆಕ್ಕ ಪರಿಶೋಧನಾ ವರದಿಯಲ್ಲಿನ ಆಕ್ಷೇಪಣೆ, ವಸೂಲಾತಿ ಮತ್ತು ತೀರುವಳಿಗೆ ಸಂಬಂಧಿಸಿದಂತೆ ಅನುಸರಣಾ ವರದಿ ಸಲ್ಲಿಸಿರುವ ಬಗ್ಗೆ ಖಾತರಿ ಪಡಿಸಿಕೊಂಡು ಬಿಲ್‌ಗಳನ್ನು ಪಾವತಿಸುವಂತೆ ಕ್ರಮವಹಿಸಬೇಕೆಂದು ಸೂಚಿಸಲಾಯಿತು.

ಕೊನೆಯಲ್ಲಿ ಅಧ್ಯಕ್ಷರು ಮಾತನಾಡುತ್ತಾ, ಸಮಿತಿಯು ಕೋರಿರುವ ಎಲ್ಲಾ ಮಾಹಿತಿಗಳನ್ನು ಮುಂದಿನ ಸಭೆಯ ದಿನಾಂಕದೊಳಗೆ ಸಮಿತಿಯ ಕಛೇರಿಗೆ ಸಲ್ಲಿಸಲು ಸೂಚಿಸುತ್ತಾ, ಅಧಿಕಾರಿ/ಸಿಬ್ಬಂದಿಗಳು ಕಛೇರಿಯ ಲೆಕ್ಕಪತ್ರಗಳ ನಿರ್ವಹಣೆಯಲ್ಲಿ ಅಸಡ್ಡೆ ಮನೋಭಾವವನ್ನು ತೋರದೆ ಕಾರ್ಯಯೋಜನೆಯನ್ನು ರೂಪಿಸಿಕೊಂಡು ಕರ್ತವ್ಯವನ್ನು ನಿರ್ವಹಿಸಬೇಕೆಂದು, ಈ ನಿಟ್ಟಿನಲ್ಲಿ ಸಮಿತಿಯು ಮುಂಬರುವ ದಿನಗಳಲ್ಲಿ ತಪಾಸಣೆಯನ್ನು ಹಮ್ಮಿಕೊಳ್ಳುವುದಾಗಿ ತಿಳಿಸುತ್ತಾ, ಸಭೆಯನ್ನು ವಂದನೆಯೊಂದಿಗೆ ಮುಕ್ತಾಯಗೊಳಿಸಿದರು.

ಅಧ್ಯಕ್ಷರು
ಲೆಕ್ಕಪತ್ರ ಸ್ಥಾಯಿ ಸಮಿತಿ